ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಗೃಹ - (ಪೊಲೀಸ್)

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 5/6/2020

# ವಿದೇಶಿ ತಬ್ಲೀಘಿಗಳಿಗೆ ಹತ್ತು ವರ್ಷ ನಿಷೇಧ

ಉ.ವಾ 5/6/20



ನವದೆಹಲಿ: ದೆಹಲಿಯಲ್ಲಿ ನಡೆದಿದ್ದ ತಬ್ಲೀಘಿ-ಎ-ಜಮಾತ್‌ನ ಬೃಹತ್ ಧಾರ್ಮಿಕ ಸಮಾರಂಭಕ್ಕೆ ವಿದೇಶಗಳಿಂದ ಆಗಮಿಸಿ, ನಿಯಮಗಳನ್ನು ಮೀರಿ ಇಲ್ಲಿಯೇ ಉಳಿದಿದ್ದ 2,550ಕ್ಕೂ ಹೆಚ್ಚು ವಿದೇಶಿ ತಬ್ಲೀಘಿಗಳನ್ನು ಮುಂದಿನ 10 ವರ್ಷಗಳವರೆಗೆ ಭಾರತ ಪ್ರವೇಶಿಸದಂತೆ ನಿಷೇಧ ಹೇರಿ ಕೇಂದ್ರ ಗೃಹ ಇಲಾಖೆ ಆದೇಶ ಹೊರಡಿಸಿದೆ.

ವೀಸಾ ನಿಯಮಗಳನ್ನು ಮೀರಿ ದೇಶದಲ್ಲೇ ಉಳಿದುಕೊಂಡಿದ್ದ ಅವರು, ದೇಶದ ನಾನಾ ಮಸೀದಿಗಳಲ್ಲಿ, ಇತರ ಧಾರ್ಮಿಕ ಸಂಸ್ಥೆಗಳಲ್ಲಿ ಹಾಗೂ ತಬ್ಲೀಘಿಗಳ ಅನುಯಾಯಿಗಳ ಮನೆಗಳಲ್ಲಿ ಈ ವಿದೇಶಿ ತಬ್ಲೀಘಿಗಳು ಉಳಿದಿದ್ದರು. ಹಾಗೆ, ಉಳಿದವರ ಹೆಸರುಗಳನ್ನು ಪತ್ತೆ ಮಾಡಿ ಅವರನ್ನು ನಿಷೇಧಿಸಲಾಗಿದೆ. ಅಂದಹಾಗೆ, ಇತ್ತೀಚೆಗೆ, ತಬ್ಲೀಘಿ-ಎ-ಜಮಾತ್ ಸಂಘಟನೆಯ ಬ್ಯಾಂಕ್ ಖಾತೆಗಳಿಗೆ ವಿದೇಶಿ ಮೂಲಗಳಿಂದ ಅಕ್ರಮವಾಗಿ ಹಣ ಹರಿದುಬರುತ್ತಿರುವ ಬಗ್ಗೆ ತನಿಖೆ ಆರಂಭಿಸಲಾಗಿದ್ದು, ಅದರ ಬೆನ್ನಲ್ಲೇ ಆ ಸಂಘಟನೆಯ ಅನುಯಾಯಿಗಳ ನಿಷೇಧಕ್ಕೆ ಸರ್ಕಾರ ಮುಂದಾಗಿದೆ.